# ಫಾಸ್ಟ್‌ಟ್ಯಾಗ್ ಬಳಸಿ ಸಮಯ ಉಳಿಸಿ

■ ಶಶಿಕುಮಾರ್ ಸಿ.

'ಡಿಸೆಂಬರ್ 1ರಿಂದ, ಟೋಲ್‌ಕೇಂದ್ರಗಳಲ್ಲಿ ಸಂಚಾರ ನಡೆಸುವ ಎಲ್ಲ ವಾಹನಗಳಿಗೆ ಫಾಸ್ಟ್‌ಟ್ಯಾಗ್ ಕಡ್ಡಾಯ. ಫಾಸ್ಟ್‌ಟ್ಯಾಗ್ ಇಲ್ಲದೆ ಟೋಲ್‌ಗೇಟ್ ಮೂಲಕ ಸಾಗುವ ವಾಹನಗಳಿಗೆ ನಿಗದಿತ ಶುಲ್ಕಕ್ಕಿಂತ ದುಪ್ಪಟ್ಟು ಹಣ ವಿಧಿಸಲಾಗುತ್ತದೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಆದೇಶ ಹೊರಡಿಸುತ್ತಿದ್ದಂತೆ ಫಾಸ್ಟ್‌ಟ್ಯಾಗ್ ಖರೀದಿಗೆ ಜನರು ಮುಗಿಬೀಳತೊಡಗಿದರು. ಆ ಗಡುವನ್ನು ಸದ್ಯ ಡಿ.15ರ ವರೆಗೆ ಪ್ರಾಧಿಕಾರವು ವಿಸ್ತರಿಸಿದ್ದು, ವಾಹನ ಮಾಲೀಕರು ಸ್ವಲ್ಪ ನಿಟ್ಟುಸಿರು ಬಿಟ್ಟಂತಾಗಿದೆ. ಕೇಂದ್ರ ಸರ್ಕಾರದ 'ಒಂದು ಟ್ಯಾಗ್ ಒಂದು ರಾಷ್ಟ್ರ' ಯೋಜನೆ ಅಡಿ ಈ ಟ್ಯಾಗ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

## ಏನಿದು ಫಾಸ್ಟ್‌ಟ್ಯಾಗ್?

ಫಾಸ್ಟ್‌ಟ್ಯಾಗ್ ಎಂಬುದು ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ (RFID) ತಂತ್ರಜ್ಞಾನ ಆಧಾರಿತ ಕಾರ್ಡ್, ಲೇಬಲ್ ಅಥವಾ ಟ್ಯಾಗ್ ಎನ್ನಬಹುದು. ವಾಹನ, ವಾಹನದ ಮಾಲೀಕ ಸೇರಿದಂತೆ ಆತನ ಬ್ಯಾಂಕ್ ಮಾಹಿತಿ ನೀಡಿ ಟ್ಯಾಗ್ ಖರೀದಿಸಬೇಕು. ಆ ಮಾಹಿತಿಯು ಟ್ಯಾಗ್‌ನೊಂದಿಗೆ ಲಿಂಕ್ ಆಗಿರುತ್ತದೆ.

ವಾಹನದ ಮುಂಭಾಗದ ಗಾಜಿನ ಮೇಲೆ ಅಂಟಿಸಿದ ಟ್ಯಾಗ್ ಅನ್ನು ಟೋಲ್ ಸಂಗ್ರಹ ಕೇಂದ್ರಗಳಲ್ಲಿರುವ ರೀಡರ್ (ಸೆನ್ಸಾರ್) ವ್ಯವಸ್ಥೆಯಿಂದ ರೀಡ್ ಮಾಡಲಾಗುತ್ತದೆ. ಅಂತೆಯೇ ರೀಡರ್, ಸ್ವಯಂಚಾಲಿತವಾಗಿ ಟ್ಯಾಗ್‌ನ ಮಾಹಿತಿ ಸಂಗ್ರಹಿಸಿ ಶುಲ್ಕ ಕಡಿತ ಮಾಡುತ್ತವೆ. ಸುಂಕ ಕಡಿತ ಪ್ರಕ್ರಿಯೆಯು ಎರಡು ರೀತಿ ಇದೆ.

ಪ್ರೀಪೇಯ್ಡ್: ಮೊಬೈಲ್‌ಗಳಿಗೆ ಕರೆನ್ಸಿ (ರೀಚಾರ್ಜ್ ಮಾಡಿಸುವಂತೆ) ಹಾಕಿಸುವಂತೆ ಈ ಟ್ಯಾಗ್‌ಗೂ ಪ್ರೀಪೇಯ್ಡ್ ರೂಪದಲ್ಲಿ ಹಣ ಹಾಕಬೇಕು. ಟೋಲ್‌ಕೇಂದ್ರಗಳಲ್ಲಿ ಸಾಗಿದರೆ ಪ್ರೀಪೇಯ್ಡ್ ಖಾತೆಯಿಂದ ಶುಲ್ಕವು ಕಡಿತಗೊಳ್ಳುತ್ತದೆ. ಆ್ಯಪ್, ಡೆಬಿಟ್, ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪೇಮೆಂಟ್ ಆ್ಯಪ್‌ಗಳ ಮೂಲಕವೂ ರೀಚಾರ್ಜ್ ಮಾಡಬಹುದು.

ಬ್ಯಾಂಕ್ ಖಾತೆ: ಬಳಕೆದಾರರು ಟ್ಯಾಗ್ ಅನ್ನು ತಮ್ಮ ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಿಸಿದರೆ, ಪ್ರತಿ ಟೋಲ್‌ಗೇಟ್ ದಾಟುವಾಗಲೂ ಬ್ಯಾಂಕ್ ಖಾತೆಯಿಂದ ಹಣ ತಾನಾಗಿಯೇ ಕಡಿತವಾಗುತ್ತದೆ.

ಈ ಟ್ಯಾಗ್‌ವುಳ್ಳ ವಾಹನವು ದೇಶದ ಯಾವುದೇ ಟೋಲ್‌ಕೇಂದ್ರಗಳಲ್ಲಿ ನಗದು ರಹಿತವಾಗಿ ಶುಲ್ಕ ಪಾವತಿಸಿ ಸಂಚರಿಸಬಹುದು. ಪ್ರತಿ ಟೋಲ್‌ಕೇಂದ್ರ ದಾಟಲು ಹತ್ತಾರು ನಿಮಿಷಗಳ ವರೆಗೆ ಸರದಿಯಲ್ಲಿ ವಾಹನಗಳನ್ನು ನಿಲ್ಲಿಸುವ ಉಸಾಬರಿಯೂ ತಪ್ಪುತ್ತದೆ. ಇಂಧನ ವ್ಯರ್ಥವಾಗುವಿಕೆ ತಪ್ಪಲಿದೆ. ಜೊತೆಗೆ ಕಡಿಮೆ ಅವಧಿಯಲ್ಲಿ ಟೋಲ್‌ಗೇಟ್ ದಾಟಬಹುದು. ಟೋಲ್ ಸಿಬ್ಬಂದಿಯೊಂದಿಗೆ ಚಿಲ್ಲರೆ ವಿಚಾರವಾಗಿ ವಾಗ್ವಾದ ನಡೆಸುವ ಪ್ರಮೇಯವೂ ಎದುರಾಗದು.

ಬಳಕೆದಾರರು ತಮ್ಮ ಬ್ಯಾಂಕಿನ ಖಾತೆಗೆ ಈ ಟ್ಯಾಗ್ ಅನ್ನು ಲಿಂಕ್ ಮಾಡಿಸುವುದಕ್ಕಿಂತ ಪ್ರೀಪೇಯ್ಡ್ ರೂಪದಲ್ಲಿ ಬಳಸುವುದು ಹೆಚ್ಚು ಅನುಕೂಲ. ಯಾಕೆಂದರೆ, ಟೋಲ್‌ಗೇಟ್‌ಗಳಲ್ಲಿ ತಕ್ಷಣಕ್ಕೆ ಟ್ಯಾಗ್‌ಗೆ ಹಣ ಹಾಕಿಸಿಕೊಳ್ಳಬಹುದು. ಅಕೌಂಟ್‌ನಲ್ಲಿ ಹಣ ಇಲ್ಲವಾದರೆ, ತಕ್ಷಣಕ್ಕೆ ಸಮಸ್ಯೆ ಎದುರಾಗುತ್ತದೆ.

## ಐದು ವರ್ಷ ಬಳಕೆಗೆ ಅವಕಾಶ

ಒಮ್ಮೆ ನೋಂದಣಿಯಾದರೆ ಐದು ವರ್ಷಗಳ ವರೆಗೆ ಫಾಸ್ಟ್‌ಟ್ಯಾಗ್‌ನ ಸೇವೆ ಪಡೆಯಬಹುದು. ಟೋಲ್ ಪ್ಲಾಜಾಗಳಲ್ಲೇ ಫಾಸ್ಟ್‌ಟ್ಯಾಗ್ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಾಹನ ಮಾಲೀಕರು ಖಾತೆದಾರರಾಗಿರುವ ಬ್ಯಾಂಕ್‌ಗಳಿಂದ ಫಾಸ್ಟ್‌ಟ್ಯಾಗ್ ಖರೀದಿಸಬಹುದಾಗಿದೆ. ಎಸ್‌ಬಿಐ, ಆಕ್ಸಿಸ್ ಬ್ಯಾಂಕ್, ಕೋಟಕ್ ಮಹೀಂದ್ರಾ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮೊದಲಾದ ನೋಂದಾಯಿತ 23 ಬ್ಯಾಂಕ್‌ಗಳ ಆಯ್ದ ಶಾಖೆಗಳಲ್ಲಿ ಇದು ಲಭ್ಯ. ಒಂದು ವೇಳೆ ನಾನಾ ಕಾರಣಗಳಿಂದ ಫಾಸ್ಟ್‌ಟ್ಯಾಗ್‌ಗೆ ಹಾನಿಯಾದರೆ, ಸೆನ್ಸಾರ್ ಗ್ರಹಿಕೆಗೆ ಅದು ಯೋಗ್ಯವಲ್ಲದಿದ್ದರೆ ಹೊಸ ಟ್ಯಾಗ್ ಅಳವಡಿಸಿಕೊಳ್ಳಬೇಕು.

## ಫಾಸ್ಟ್‌ಟ್ಯಾಗ್ ಕಿತ್ತು ವಾಹನ ಮಾರಿ

ಬಳಕೆದಾರರು ಫಾಸ್ಟ್‌ಟ್ಯಾಗ್‌ವುಳ್ಳ ತಮ್ಮ ವಾಹನ ಮಾರಾಟ ಮಾಡುವಾಗ ಟ್ಯಾಗ್ ಅನ್ನು ತೆಗೆದು ಮಾರುವುದು ಒಳಿತು. ಒಂದು ವೇಳೆ ಮರೆತರೆ ಟೋಲ್ ಕೇಂದ್ರಗಳಿಗೆ ಹೋಗಿ ಅದನ್ನು ಬ್ಲಾಕ್ ಮಾಡಿಸಬೇಕು. ಇಲ್ಲವಾದರೆ, ವಾಹನ ಮರು ಖರೀದಿಸಿದವರು ಟೋಲ್‌ಕೇಂದ್ರಗಳಲ್ಲಿ ಸಾಗುವಾಗ, ಕಾರಿನ ಹಿಂದಿನ ಮಾಲೀಕರ ಪ್ರೀಪೇಯ್ಡ್ ಅಥವಾ ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗುತ್ತದೆ.

## ಆ್ಯಪ್ ಸಹ ಲಭ್ಯ

ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'ಮೈ ಫಾಸ್ಟ್‌ಟ್ಯಾಗ್' ಆ್ಯಪ್ ಸಹ ಲಭ್ಯವಿದೆ. ಅದನ್ನು ಡೌನ್‌ಲೋಡ್ ಮಾಡಿ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಬಳಿಕ ಅದಕ್ಕೆ ಲಾಗಿನ್ ಆಗಿ, ಬಳಸಬಹುದು. ಸಮೀಪದ ಫಾಸ್ಟ್‌ಟ್ಯಾಗ್ ಮಾರಾಟ ಕೇಂದ್ರದ ಮಾಹಿತಿ ಪಡೆಯಲು www.ihmcl.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಅಥವಾ ರಾಷ್ಟ್ರೀಯ ಹೆದ್ದಾರಿ ಸಹಾಯವಾಣಿ ಸಂಖ್ಯೆ 1023ಕ್ಕೆ ಕರೆ ಮಾಡಬಹುದು. ■

## ಸಮಸ್ಯೆಗಳು ಬಗೆಹರಿದಿಲ್ಲ!



ಫಾಸ್ಟ್‌ಟ್ಯಾಗ್‌ನೊಂದಿಗೆ ಬಳಕೆದಾರರ ವೈಯಕ್ತಿಕ ಹಾಗೂ ಬ್ಯಾಂಕಿನ ಮಾಹಿತಿಯೂ ಲಿಂಕ್ ಆಗಿರುತ್ತದೆ. ಬೇರೆ ಬೇರೆ ಟೋಲ್‌ಗಳನ್ನು ಈ ಟ್ಯಾಗ್ ಹೊಂದಿದ ವಾಹನಗಳು ದಾಟುವಾಗ ಬಳಕೆದಾರರ ವೈಯಕ್ತಿಕ ಮಾಹಿತಿಯೂ ಅಲ್ಲಿ ಸಂಗ್ರಹವಾಗುತ್ತದೆ. ಅದನ್ನು ಮಾರಾಟ ಮಾಡುವ ಅಥವಾ ಸೋರಿಕೆಯಾಗುವ ಸಾಧ್ಯತೆಯೂ ಹೆಚ್ಚು. ಈ ಬಗ್ಗೆ ಪ್ರಾಧಿಕಾರವು ಸ್ಪಷ್ಟನೆ ನೀಡಿಲ್ಲ. ಹೀಗಾಗಿ, ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಿಸುವುದಕ್ಕಿಂತ ಪ್ರೀಪೇಯ್ಡ್ ರೂಪದಲ್ಲಿಯೇ ಬಳಸಿ.

ಟೋಲ್‌ಕೇಂದ್ರಗಳಲ್ಲಿ 'ಸಿಂಗಲ್ ಜರ್ನಿ' ಹಾಗೂ 'ಡಬಲ್ ಜರ್ನಿ' ಆಯ್ಕೆಗಳಿವೆ. 'ಸಿಂಗಲ್ ಜರ್ನಿ' ಎಂದರೆ ನಿಗದಿತ ಟೋಲ್ ಕೇಂದ್ರದ ಮೂಲಕ ಶುಲ್ಕ ಪಾವತಿಸಿ ಒಮ್ಮೆ ಹಾದು ಹೋಗಲು ಇರುವ ಅವಕಾಶ. 'ಡಬಲ್ ಜರ್ನಿ' ಎಂದರೆ ಟೋಲ್ ಕೇಂದ್ರವೊಂದರಲ್ಲಿ ಎರಡು ಬಾರಿ (ಹೋಗಲು ಮತ್ತು ಹಿಂದಿರುಗಲು) ಹಾದು ಹೋಗಲು ಅವಕಾಶ ಕಲ್ಪಿಸುವುದು. ಡಬಲ್ ಜರ್ನಿ ಆಯ್ಕೆಯಿಂದ ಬಳಕೆದಾರರಿಗೆ ಶುಲ್ಕ ವಿನಾಯಿತಿಯೂ ಸಿಗುತ್ತಿದೆ. ಆದರೆ, ಫಾಸ್ಟ್‌ಟ್ಯಾಗ್ ಕಡ್ಡಾಯವಾದ ಬಳಿಕ 'ಸಿಂಗಲ್ ಜರ್ನಿ'ಗೆ ಮಾತ್ರ ಅವಕಾಶವಿದ್ದು, 'ಡಬಲ್ ಜರ್ನಿ' ಬಗ್ಗೆ ಸ್ಪಷ್ಟನೆ ಇಲ್ಲ.